# ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ದಿನಾಂಕ: 7/11/2016

ಅಂತರ್ ಮಹಾವಿದ್ಯಾಲಯ ಯುವಜನೋತ್ಸವ 2016-17 ವಿಶೇಷ ಸಂಚಿಕೆ:1


# "ಕೆಸಿಡಿಯಲ್ಲಿ ಅಂತರ ಮಹಾವಿದ್ಯಾಲಯಗಳ ರಂಗಿನ ಯುವಜನೋತ್ಸವ"

ಝುಗಮಗಿಸುವ ರಂಗಿನ ಯುವಜನೋತ್ಸವ ಮತ್ತೆ ಹಬ್ಬವನ್ನು ತಂದಂತಿದೆ. ಪ್ರತಿ ವರ್ಷದಂತೆ ಈ ವರ್ಷ ಕೂಡಾ ದಿನಾಂಕ 7 ಮತ್ತು 8 ನವಂಬರಂದು ನಡೆಯಲಿದ್ದು, ಯುವಕ ಯುವತಿಯರ ಕಲಾ ಪ್ರತಿಭೆ ಅನಾವರಣಗೊಳ್ಳಲಿದೆ. ಸೋಲು ಗೆಲವುಗಳ ತವಕದೊಂದಿಗೆ ಪ್ರಾರಂಭವಾಗುವ ಈ ರಂಗು ರಂಗಿನ ಯುವಜನೋತ್ಸವ, ಎಲ್ಲರ ತನು ಮನಗಳನ್ನು ಚಕಿತಗೊಳಿಸಲಿದೆ. ಸಾಧನೆಯ ಶಿಖರ ಏರುವ ಸಾಧಕರಿಗೆ ಇದೊಂದು ವೇದಿಕೆ ಆಗಲಿದೆ. ಅದರಲ್ಲೂ ಶತಮಾನೋತ್ಸವದ ಹೊಸ್ತಿನಲ್ಲಿರುವ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನಡೆಯುವ ಈ ಉತ್ಸವ, ಉತ್ಸಾಹ ಮತ್ತು ಮನರಂಜನೆಯನ್ನು ನಿರ್ಮಿಸುವ ಯುವಕ ಯುವತಿಯರ ಉತ್ಸವ ಆಗಲಿದೆ. ಇಲ್ಲಿ ತಮ್ಮದೇ ಆದ ಕಲೆ, ಸಾಹಿತ್ಯ, ಪ್ರಬಂಧ, ನಾಟಕ, ನೃತ್ಯ, ಸಾಂಪ್ರದಾಯಕ ಕುಣಿತಗಳು, ಅದರಲ್ಲೂ ಜಾನಪದ ಕಲೆ ಅನಾವರಣಗೊಳ್ಳಲಿದೆ.



ಶತಮಾನದ ಹೊಸ್ತಿಲಲ್ಲಿ ಕರ್ನಾಟಕ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಧಾರವಾಡ

ಕಲಾ ರಸಿಕರಿಗೆ, ಕಲಾ ಪ್ರೇಮಿಗಳಿಗೆ ವಿವಿಧ ಕಾಲೇಜಿನ ಸ್ಪರ್ಧಾರ್ತಿಗಳು, ನೋಡುಗರ ಮನಸೂರೆಗೊಳಿಸುವಲ್ಲಿ ತಮ್ಮ ನೃತ್ಯ, ಗಾಯನದ ಮೂಲಕ ತಣಿಸುವ ಒಂದು ಅದ್ಬುತ ರಂಗೋತ್ಸವ ಇದಾಗಲಿದೆ. ಯುವಜನೋತ್ಸವದ ಉದ್ದೇಶ ಕೇವಲ ಮನರಂಜನೆಯ ಜಾಡನ್ನು ಹಿಡಿದಿರುವ ಮನರಂಜನೆ ಅಲ್ಲ. ಅದು ಯುವ ಪ್ರತಿಭೆಗಳಿಗೆ ಸ್ಪಂದಿಸುವ ಅಧ್ಬುತ ವೇದಿಕೆ ಆಗಲಿದೆ. ಹೊಸ ಕಲೆಗಳಿಗೆ ಮತ್ತು ವೃತ್ತಿ ಜೀವನದಲ್ಲಿ ಬದುಕು ಕಟ್ಟಿಕೊಳ್ಳುವವರಿಗೆ ಇದೊಂದು ಅವಕಾಶದ ಗೂಡಾಗಲಿದೆ. ರಂಗು ರಂಗಿನ ಯುವಜನೋತ್ಸವ ಸಂಗೀತದ ಸಿಂಚನ ಮೂಡಿಸಲಿದೆ. ಈ ಅಂತರ ಮಹಾವಿದ್ಯಾಲಯದ ಒಂದನೇ ವಲಯದ ಕರ್ನಾಟಕ ಕಾಲೇಜಿನ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳು ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಲಿದ್ದಾರೆ.

-ಸುನೀಲ ಗದೆಪ್ಪಗೋಳ
ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿ

## ಪ್ರಾಧ್ಯಾಪಕರ ಸಹಕಾರದಿಂದ ಯುವಜನೋತ್ಸವ.....



ಡಾ. ಎಸ್. ಎಸ್. ಕಟ್ಟಿಮನಿ ಪ್ರಾಚಾರ್ಯರು

ಕರ್ನಾಟಕ ವಿಶ್ವವಿದ್ಯಾಲಯದ ನಿಯಮಾನುಸಾರ ಪ್ರತಿಯೊಂದು ಮಹಾವಿದ್ಯಾಲಯವು ಎರಡು ವರ್ಷ ಕಡ್ಡಾಯವಾಗಿ ಯುವಜನೋತ್ಸವವನ್ನು ಮಾಡಬೇಕಿತ್ತು. ಆದರೆ ಯಾವುದೇ ಕಾಲೇಜ ಒಪ್ಪಿಕೊಳ್ಳದ ಕಾರಣ ನಾವು ಈಗಾಗಲೇ ಎರಡು ವರ್ಷ ಅದ್ದೂರಿಯಿಂದ ಈ ಯುವಜನೋತ್ಸವವನ್ನು ಮಾಡಿದ್ದೇವೆ. ಆದರೂ ಕೂಡಾ ಸೆಮಿಸ್ಟರ್ ಪದ್ದತಿಯಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಕಡಿಮೆ ಸಮಯದಲ್ಲಿಯೂ ಈ ಯುವಜನೋತ್ಸವವನ್ನು ನಡೆಸಲು ಎಲ್ಲರು ಸಹಕಾರ ನೀಡಿದ್ದಾರೆ.

## ವಿದ್ಯಾರ್ಥಿಗಳಿಗೆ ಇದು ಒಂದು ವೇದಿಕೆಯಾಗಿದೆ......



ಡಾ. ರಾಜೇಶ್ವರಿ ಮಹೇಶ್ವರಯ್ಯ
ಉಪಪ್ರಾಚಾರ್ಯರು

"ಯುವಕರು ನಮ್ಮ ಬಾಳಿನ, ಬದುಕಿನ ಚೇತನ. ಅವರ ಉತ್ಸವ ಹಾಗು ಕಲೆಗಳು ಕರ್ನಾಟಕ ಕಾಲೇಜಿನಲ್ಲಿ ಈ ಮೊದಲು ಇಲ್ಲಿ ಆತಿಥ್ಯಗೊಂಡಿದ್ದವು. ಅನೇಕ ವರ್ಷಗಳ ನಂತರ ಈ ಯುವಜನೋತ್ಸವ ನಮ್ಮ ಕಾಲೇಜಿಗೆ ಬರಬೇಕಾಗಿತ್ತು. ಆದರೆ ಕಲೆಯ ಆಗರವೋ ಏನೋ ಇದು ಮತ್ತೇ ಇಲ್ಲೇ ಬಂದಿರುವುದು ಸಂತಸದ ವಿಷಯವಾಗಿದೆ. ಯುವ ಪ್ರತಿಭೆಗಳ ಕಲೆಯು ಇಲ್ಲಿ ಯಶಸ್ಸುಗೊಳ್ಳಲಿವೆ. ಹಾಗು ಈ ಯುವಜನೋತ್ಸವವನ್ನು ಯಶಸ್ವಿಗೊಳಿಸಲಿಕ್ಕೆ ಪ್ರಯತ್ನಿಸುತ್ತೇವೆ.

## ಪ್ರಶಸ್ತಿಗಾಗಿ ಹದಿನಾಲ್ಕು ಕಾಲೇಜುಗಳ ಪೈಪೋಟಿ...

ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನಡೆಯುವ ಯುವಜನೋತ್ಸವದಲ್ಲಿ ಕಾಲೇಜಿನ ವ್ಯಾಪ್ತಿ ಹದಿನಾಲ್ಕು ಕಾಲೇಜುಗಳು ನೋಂದಣಿ ಮಾಡಿಸಿದ್ದು, ಇಂದು ನಡೆಯುವ ವಿವಿಧ ಸ್ಫರ್ದೆಗಳಲ್ಲಿ 200 ಕಿಂತ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿಯಿನಿರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲಿದ್ದಾರೆ.

ಡಾ ವಿ.ಆರ್ ಯಾರ್ದಿ
ಯುವಜನೋತ್ಸವದ
ಕಾರ್ಯಕ್ರಮದ
ಸಂಯೋಜಕರು.

## ಯುವಜನೋತ್ಸವದ ಕುರಿತು ವಿದ್ಯಾರ್ಥಿಗಳ ಅಭಿಪ್ರಾಯ

**ಹಬ್ಬದ ವಾತಾವರಣ........!**

"ಉತ್ತರ ಕರ್ನಾಟಕದ ಪ್ರತಿಷ್ಠಿತ ಸಾಲಿನಲ್ಲಿ ಬರುವ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನಡೆಯಲಿರುವ ಅಂತರ್ ಮಹಾವಿದ್ಯಾಲಯಗಳ ಒಂದನೇ ವಲಯದ ಯುವಜನೋತ್ಸವ ನಮಗೆ ಒಂದು ಹಬ್ಬವನ್ನು ತಂದಿದೆ. ಪ್ರತಿ ವರ್ಷದಂತೆ ಈ ವರ್ಷವು ಸಹ ನಡೆಯಲಿರುವ ಈ ಯುವಜನೋತ್ಸವ ಅನೇಕ ಯುವ ಪ್ರತಿಭೆಗಳಿಗೆ ವೇದಿಕೆಯನ್ನು ಸಜ್ಜುಗೊಳಿಸಿದೆ. ಹಾಗು ಎಲ್ಲಾ ಸ್ಪರ್ಧಾಳುಗಳು ನೋಡುಗರ ಮನಸ್ಸುಗಳನ್ನು ಉತ್ಸಾಹ ತುಂಬಿಸುವ ತವಕದಲ್ಲಿದ್ದಾರೆ."

**ಲಕ್ಷ್ಮಿ ಮೊರಬ್ಮ**
**ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿನಿ**

ಈ ಯುವಜನೋತ್ಸವವು ಎಲ್ಲ ವಿದ್ಯಾರ್ಥಿಗಳಿಗೆ ಒಂದು ವೇದಿಕೆ ಯಾಗಿದ್ದು, ಪಠ್ಯಚಟುವಟಕೆಗಳ ಜೊತೆಗೆ ಪಠ್ಯೇತರಚಟುವಟಕೆಗಳಿಗೆ ಸಹಾಯಕವಾಗಲಿದ್ದು, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳ ಜೋತೆಗೆ ಬೆರೆಯುವ ಅವಕಾಶ ದೂರೆಯುವುದರ ಜೊತೆಗ್ಮೆಮನಸ್ಸು ಹುಮ್ಮಸ್ಸು ಮತ್ತು ಸ್ಫರ್ತಿ ಗೋಳ್ಳುತ್ತದೆ.

**ಅಭಿಷೇಕ್,**
**ಸ್ಫರ್ಧಾಳು**
**ಕೆಸಿಡಿ ಕಾಲೇಜು ಧಾರವಾಡ**

ಇಂದು ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿ ಚಟುವಟಿಕೆಗಳು ಕಡಿಮೆ ಆಗುತ್ತಿದ್ದು, ಈ ಯುವಜನೋತ್ಸವದಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಗುತ್ತದೆ.

**ನಿವೇದಿತಾ**
**ಸ್ಫರ್ಧಾಳು**
**ಕೆಸಿಡಿ ಕಾಲೇಜು ಧಾರವಾಡ**

## ಭರದ ಸಿದ್ಧತೆ.........



ಯುವಜನೋತ್ಸವದ ಕಾರ್ಯಕ್ರಮದ ಸಂಂ-ಯೋಜಕರಾದ ಡಾ ಯಾರ್ದಿಅವರು ಸಿದ್ದತೆಗಾಗಿ ಪ್ರಾಧ್ಯಾಪಕರಾದ ಡಾ ಮುಕುಂದ ಲಮಾಣಿ, ಡಾ ಎಂ.ಬಿ ದಳಪತಿ, ಡಾ. ಬಿ ಎಸ್ ಭಜಂತ್ರಿ ಡಾ ಜಾಧವ ಮತ್ತು ಡಾ ಆಯ ಸಿ ಮುಳಗುಂದ ಅವರ ಜೊತೆ ಸಮಾಲೋಚಿಸುತ್ತಿರುವದು.


ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ, ಲಕ್ಷ್ಮೀ . ಪುಟ ವಿನ್ಯಾಸ: ಶ್ರೀಹರಿ.